ವಿಶ್ವವಾಣಿ

ಸಂಪಾದಕೀಯ

ಯುದ್ಧೋನ್ಮಾದ ನಿಲ್ಲುವುದೆಂದು?

'ಹೇ ಯುದ್ಧ... ನೀನೇಕೆ ಬರುವೆ ಈ ಭೂಮಿಗೆ, ತೊಲಗಾಚೆ ನೀನು ಧರೆಯಾಚೆಗೆ, ಮಾನವನ ಮಾರಣಹೋಮಕ್ಕೆ ಸಿದ್ಧ, ಜಗ ನುಂಗೋ ಯಮದೂತ! ಜನ ನುಂಗೋ ರಣಭೂತ! ನಿನಗಿನ್ನೂ ದಾಹ ಹಿಂಗಿಲ್ವಾ?' ಎಂದು ಪ್ರಶ್ನಿಸುತ್ತದೆ ಚಿತ್ರಗೀತೆಯೊಂದರ ಸಾಲು. ಆದರೆ ರಕ್ತದಾಹಿಗಳಿಗೆ ಯುದ್ಧದ ಭೀಕರತೆ ಮತ್ತು ತರುವಾಯದ ನರಳಾಟಗಳು ಇನ್ನೂ ಅರಿವಾದಂತಿಲ್ಲ. ಹೀಗಾಗಿ ವಿಶ್ವದ ಕೆಲವೆಡೆ ಯುದ್ಧೋನ್ಮಾದ ಅಬಾಧಿತವಾಗಿದೆ. ರಷ್ಯಾ ಮತ್ತು ಉಕ್ರೇನ್ ನಡುವೆ ಭೀಕರ ಸಮರ ಏರ್ಪಟ್ಟು ಗಣನೀಯ ಜೀವನಷ್ಟಕ್ಕೆ ಮತ್ತು ಅಗಾಧ ಸ್ವತ್ತುಹಾನಿಗೆ ಅದು ಕಾರಣವಾದಾಗ, 'ಈ ಯುದ್ಧ ಇನ್ನಾದರೂ ನಿಲ್ಲಬಾರದೇ?' ಎಂದು ಅಮಾಯಕರು ಚೀರಿದ್ದುಂಟು. ಆದರೆ ಅದೊಂದು ಅರಣ್ಯರೋದನ ಎಂದು ಖಾತ್ರಿಯಾಗಿದ್ದು ಇಸ್ರೇಲ್ ಮತ್ತು ಹಮಾಸ್ ಉಗ್ರರ ನಡುವೆ ಘರ್ಷಣೆ ಶುರುವಾಗಿ ತಾರಕಕ್ಕೇರಿದಾಗ. ಈ ಸಮರದಲ್ಲೂ ಉಭಯ ಪಾಳಯಗಳಿಗೆ ಆಗಿರುವ ವಿವಿಧ ನೆಲೆಗಟ್ಟಿನ ನಷ್ಟಗಳನ್ನು ಬಿಡಿಸಿ ಹೇಳಬೇಕಿಲ್ಲ. ಇವೆರಡು ನಿದರ್ಶನಗಳಿಂದಲೇ ಶಾಂತಿಪ್ರಿಯರು ಏದುಸಿರು ಬಿಡುತ್ತಿರುವಾಗಲೇ, ಅತ್ತ ಇಸ್ರೇಲ್ ಮೇಲೆ ಡ್ರೋನ್ ಮತ್ತು ಕ್ಷಿಪಣಿಗಳ ಮಳೆಯನ್ನೇ ಸುರಿಸಿದೆ ಇರಾನ್. ಡಮಾಸ್ಕನಲ್ಲಿನ ತನ್ನ ರಾಯಭಾರ ಕಚೇರಿಯ ಮೇಲೆ ದಾಳಿ ನಡೆಸಿ ಅಧಿಕಾರಿಗಳ ಸಾವಿಗೆ ಕಾರಣವಾಗಿದ್ದ ಇಸ್ರೇಲ್ ಮೇಲೆ ಪ್ರತೀಕಾರ ಸ್ವರೂಪದಲ್ಲಿ ಇರಾನ್ ನಡೆಸಿದ ದಾಳಿಯಂತೆ ಇದು. ಕಾರಣಗಳೇನೇ ಇರಲಿ, ಒಂದೆಡೆ ಕೂತು ಸಮಾಲೋಚಿಸಿ ಇತ್ಯರ್ಥಪಡಿಸಿಕೊಳ್ಳಬೇಕಾದ ಚರ್ಚಾ ವಿಷಯಗಳನ್ನು, ಬುಲೆಟ್ಟು-ಬಾಂಬುಗಳ ಮೇಲುಸ್ತುವಾರಿಕೆಯಲ್ಲಿ ಬಗೆ ಹರಿಸಿಕೊಳ್ಳಲು ಮುಂದಾಗುವವರನ್ನು ಮೂಢರೆನ್ನಬೇಕಾಗುತ್ತದೆ. ಕಾರಣ, ಎಲ್ಲ ಸಮಸ್ಯೆಗಳಿಗೂ ಯುದ್ಧವೊಂದೇ ಉತ್ತರವಲ್ಲ. ಎರಡನೇ ಮಹಾ ಯುದ್ಧದ ವೇಳೆ ಜಪಾನಿನ ಹಿರೋಷಿಮಾ-ನಾಗಸಾಕಿ ನಗರಗಳ ಮೇಲಾದ ಬಾಂಬ್ ದಾಳಿ ಅದೆಷ್ಟು ಘೋರವಾಗಿತ್ತೆಂದರೆ, ಅದರಿಂದ ಚೇತರಿಸಿಕೊಳ್ಳುವುದಕ್ಕೆ ಜಪಾನ್‌ಗೆ ವರ್ಷಗಳೇ ಹಿಡಿಯಿತು. ಯುದ್ಧೋನ್ಮಾದದಲ್ಲಿ ಬಾಂಬು-ಬುಲೆಟ್ಟುಗಳನ್ನು ಕೈಯಲ್ಲಿ ಹಿಡಿದಿರುವವರಿಗೆ ಇಂಥ ಭೀಕರತೆಯ ಅರಿವಿಲ್ಲವೇ? 'ಜಗತ್ತಿಗೆ ಮತ್ತೊಂದು ಯುದ್ಧವನ್ನು ನಿಭಾಯಿಸುವ ಶಕ್ತಿ ಇಲ್ಲ' ಎಂದು ವಿಶ್ವಸಂಸ್ಥೆಯೂ ಹೇಳಿಕೊಂಡಿದೆ. ಆದರೆ ಯುದ್ಧೋನ್ಮಾದಿಗಳಿಗೆ ಇಂಥ ಸೂಕ್ಷ್ಮ ಎಲ್ಲಿ ಅರ್ಥವಾಗಬೇಕು?!

ಸೊಂಪಾದಕೀಯ

ಛೀ ಕಳ್ಳ, ಓನ್ ಮಾಡ್ತಾ ಇದ್ದೀಯಾ..

'ಕಳ್ಳನಿಗೊಂದು ಪಿಳ್ಳೆ ನೆವ' ಅನ್ನೋ ಮಾತನ್ನು ನಾವೆಲ್ಲಾ ಕೇಳಿರ್ತೀವಿ. ಆದರೆ ಮನೋಜ್ ಪಿಳ್ಳೆ ಎಂಬಾತ ಕಳ್ಳತನದಲ್ಲೂ ತನ್ನ ಸ್ಟ್ಯಾಂಡರ್ಡ್ ಮೆರೆದಿದ್ದ ಕಥೆಯಿದು. ಅಂದರೆ ಈತ ನೇಪಾಳದಿಂದ ತನ್ನ ಸ್ನೇಹಿತ ಅಥವಾ ಸಹಚರನೊಂದಿಗೆ ಬೆಂಗಳೂರಿಗೆ ಫ್ಲೈಟಿನಲ್ಲಿ ಬಂದು ಇಲ್ಲಿ ಕಳ್ಳತನ ಮಾಡುತ್ತಿದ್ದನಂತೆ. ಫ್ಲೈಟ್‌ನಲ್ಲಿ ಬಂದ ಅಂದಾಕ್ಷಣ ಅದನ್ನು ಲೈಟ್ ಆಗಿ ತಗೊಂಡು ಇಂಥವರನ್ನು ಸಾಚಾಮನುಷ್ಯ ಅಂತ ತಪ್ಪು ತಿಳಿದುಕೊಳ್ಳುವ ಹಾಗಿಲ್ಲ ಅನ್ನೋ ಸಂದೇಶ ನೀಡಿದವನೀತ. ಮೊದಲು ಮುಂಬೈನಲ್ಲಿ ಪಕ್ಕಾ ಪ್ರೊಫೆಷನಲ್ ಕಳ್ಳ ಆಗಿದ್ದ ಈತ ಈ ಮೊದಲು ಕೂಡಾ ಬೆಂಗಳೂರಿನಲ್ಲಿ ಇದ್ದುಕೊಂಡೇ ಕಳ್ಳತನ ಮಾಡಿದ್ದ. ಆಗ ಬೆಂಗಳೂರಿನ ವಿದ್ಯಾರಣ್ಯಪುರದ ಪೊಲೀಸರು ಈತನನ್ನು ಮಾವನ ಮನೆಗೆ ಕಳಿಸಿದ್ದರು. ಅಲ್ಲಿಂದ ಬಿಡುಗಡೆಯಾಗಿ ಈತ ಸ್ವಂತ ಮನೆಗೆ ತೆರಳಿದ್ದ. ಆದರೆ ವಿದ್ಯಾರಣ್ಯಪುರ ಪೊಲೀಸರು ಜೈಲಿಗೆ ಹಾಕಿದರೂ ಈತ ಕಲಿತ ವಿದ್ಯೆಯನ್ನು ಮಾತ್ರ ಬಿಡಲಿಲ್ಲ, ಜತೆಗೆ ವಿದ್ಯೆ ಅಷ್ಟೇ ಅಲ್ಲ, ಒಳ್ಳೆಯ ಬುದ್ಧಿಯನ್ನೂ ಕಲಿಯಲಿಲ್ಲ. 'ನಂಗೆ ಗೊತ್ತಿರೋದು ಅದೊಂದೇ ವಿದ್ಯೆ' ಅನ್ನೋ ಹಾಗೆ ಮತ್ತೆ ಕಳ್ಳತನದ ಫೀಲ್ಡಿಗೇ ಇಳಿದಿದ್ದ. ವಿಶೇಷ ಅಂದ್ರೆ ಈತ ಮುಂಬೈನಲ್ಲಿ ಮೊದಲು ಸೆಕ್ಯುರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದನಂತೆ. ಪಾಪ, ಕೆಲಸ ಮಾಡಿ ದುಡಿದು ತಿನ್ನೋದು ಇವನಿಗೆ ಆಗಿಬರಲಿಲ್ಲ ಅನ್ಸುತ್ತೆ. ಹಾಗಾಗಿ ಬೇರೆಯವರು ಕಳ್ಳತನ ಮಾಡಬಾರದು ಅಂತ ಎಚ್ಚರವಾಗಿದ್ದು ಕೆಲಸ ಮಾಡುವ ಸೆಕ್ಯುರಿಟಿ ಗಾರ್ಡ್ ಆಗಿದ್ದವನು ನಂತರ ತಾನೇ ಕಳ್ಳತನ ಮಾಡಲು ಇಳಿದ. ಹಾಗಂತ ಇದನ್ನು 'ಬೇಲಿಯೇ ಎದ್ದು ಹೊಲ ಮೇಯ್ದ ಹಾಗೆ' ಅನ್ನೋದು ಸರಿ ಅಲ್ಲ. ಬೇಲಿ ಎದ್ದು ಇನ್ನೊಬ್ಬರ ಹೊಲ ಮೇಯ್ದ ಹಾಗೆ ಅನ್ನಬಹುದು ಅಷ್ಟೇ. ಮಾಡೋಕೆ ಕೆಲಸ ಇದ್ದರೂ ದುಡಿದು ತಿನ್ನೋದು ಕಷ್ಟ ಗುರೂ ಅಂತ ಪಿಳ್ಳೆ ನೆವ ಹೇಳಿಕೊಂಡು ಈಗ ಪಿಳ್ಳೆ ಕಳ್ಳನಾಗಿದ್ದ. ಅಷ್ಟೇ ಅಲ್ಲದೆ ಕೆಲ ತಿಂಗಳ ಹಿಂದೆ ಈತ ಮತ್ತೆ ಪೊಲೀಸರ ಅತಿಥಿಯಾದ. ವ್ಯತ್ಯಾಸ ಅಂದ್ರೆ ಆಗ ಇವನ ಜತೆ ಜೈಲಿನಲ್ಲಿ ಕಂಪನಿ ಕೊಡೋಕೆ ಇವನ ಸ್ನೇಹಿತ ಕೂಡಾ ಇದ್ದ. 'ಸೆರೆಯಲ್ಲೂ ಸ್ನೇಹ' ಅನ್ನೋ ಟೈಟಲ್ ಇಟ್ಟು ಇವರ ಕಥೇನ ಸಿನಿಮಾ ಮಾಡಿದ್ದಿದ್ರೆ ಚೆನ್ನಾಗಿರ್ತಿತ್ತು!

ಸಂಪಾದಕರ ಸದ್ಯಶೋಧನೆ

ಲೋಕಸಭೆ ಮತ್ತು ಮುಸ್ಲಿಮರು

ಲೋಕಸಭೆಯಲ್ಲಿ ಮುಸ್ಲಿಮರು ಕಡಿಮೆ ಪ್ರಾತಿನಿಧ್ಯವನ್ನು ಹೊಂದಲು ಒಂದು ಪ್ರಮುಖ ಕಾರಣವೆಂದರೆ ಅವರು ದೇಶಾದ್ಯಂತ ಸಮಾನವಾಗಿ ಹರಡಿರದೇ ಇರುವುದು. ಹದಿನಾರನೇ ಲೋಕಸಭೆಯ ತನಕ, ಕೇವಲ 489 ಮುಸ್ಲಿಂ ಸದಸ್ಯರು ಲೋಕಸಭೆಗೆ ಆರಿಸಿ ಬಂದಿದ್ದರು. ಅವರೆಲ್ಲ ಹೆಚ್ಚಾಗಿ ಯಾವ ರಾಜ್ಯದಿಂದ ಆರಿಸಿ ಬಂದವರು? ಮುಸ್ಲಿಂ ಜನಸಂಖ್ಯೆ ಯಾವ ರಾಜ್ಯದಲ್ಲಿ ಹೆಚ್ಚಿದೆಯೋ, ಆ ರಾಜ್ಯಗಳಿಂದ ಅವರು ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆಯಾಗಿರುವುದನ್ನು ಗಮನಿಸಬಹುದು. 2011ರ ಜನಗಣತಿಯ ಪ್ರಕಾರ, ಸುಮಾರು 50 ಪ್ರತಿಶತದಷ್ಟು ಮುಸ್ಲಿಮರು ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಮತ್ತು ಬಿಹಾರ ಈ ಮೂರು ರಾಜ್ಯಗಳಲ್ಲಿ ವಾಸಿಸುತ್ತಿದ್ದಾರೆ. ಈ ಮೂರು ರಾಜ್ಯಗಳಿಂದ ಶೇ.52ರಷ್ಟು ಮುಸ್ಲಿಮರು ಲೋಕಸಭೆಗೆ ಆಯ್ಕೆಯಾಗುತ್ತಿದ್ದಾರೆ. ಮುಸ್ಲಿಂ ಲೋಕಸಭಾ ಸದಸ್ಯರು ಹೆಚ್ಚಾಗಿರುವ ಇನ್ನುಳಿದ ಎರಡು ರಾಜ್ಯಗಳೆಂದರೆ ಜಮ್ಮು-ಕಾಶ್ಮೀರ ಮತ್ತು ಕೇರಳ. ಪ್ರತಿ ರಾಜ್ಯವೂ ಶೇ.5ರಷ್ಟು ಮುಸ್ಲಿಂ ಜನಸಂಖ್ಯೆಯನ್ನು ಹೊಂದಿದೆ. 1952ರಿಂದ ಆಯ್ಕೆಯಾದ ಮುಸ್ಲಿಂ ಲೋಕಸಭಾ ಸದಸ್ಯರ ಪೈಕಿ ಶೇ.8ರಷ್ಟು ಮಂದಿ ಈ ಎರಡು ರಾಜ್ಯಗಳಿಂದ ಆಯ್ಕೆಯಾದವರು. ದೇಶದಲ್ಲಿ ಶೇ.40ಕ್ಕಿಂತ ಹೆಚ್ಚು ಮುಸ್ಲಿಂ ಮತದಾರರು ಇರುವ 29 ಲೋಕಸಭಾ ಕ್ಷೇತ್ರಗಳಿವೆ. ಶೇ.82 ಲೋಕಸಭಾ ಸೀಟುಗಳ ಪೈಕಿ, ಶೇ.20ಕ್ಕಿಂತ ಕಡಿಮೆ ಮುಸ್ಲಿಂ ಮತದಾರರು ಇದ್ದಾರೆ. ಸ್ವಾಭಾವಿಕವಾಗಿ, ಲೋಕಸಭೆಯ ಫಲಿತಾಂಶಗಳು, ಮುಸ್ಲಿಮರು ಕೇಂದ್ರೀಕೃತವಾಗಿರುವ ಕ್ಷೇತ್ರಗಳಿಂದ ಮುಸ್ಲಿಂ ಅಭ್ಯರ್ಥಿಗಳು ಚುನಾಯಿತರಾಗುವ ಸಾಧ್ಯತೆ ಹೆಚ್ಚು ಎಂಬುದನ್ನು ತೋರಿಸುತ್ತದೆ. 1998ರಿಂದ ಕಳೆದ ಐದು ಸಾರ್ವತ್ರಿಕ ಚುನಾವಣೆಗಳಲ್ಲಿ ಮುಸ್ಲಿಂ ವಿಜೇತರನ್ನು ಪರಿಶೀಲಿಸಿದಾಗ, 55 ಪ್ರತಿಶತದಷ್ಟು ಮುಸ್ಲಿಂ ಸಂಸದರು ಈ 29 'ಮುಸ್ಲಿಮರೇ ಹೆಚ್ಚು ಸಾಂದ್ರ'ರಾಗಿರುವ ಸ್ಥಾನಗಳಿಂದ ಚುನಾಯಿತರಾಗಿದ್ದಾರೆ. ಇತರ 45 ಪ್ರತಿಶತದಷ್ಟು ಜನರು 514 ಸ್ಥಾನಗಳಿಂದ ಚುನಾಯಿತರಾಗಿದ್ದಾರೆ, ಅಲ್ಲಿ ಮುಸ್ಲಿಂ ಮತದಾರರು ಶೇ. 40ಕ್ಕಿಂತ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಒಂದು ಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಮುಸ್ಲಿಂ ಅಭ್ಯರ್ಥಿಗಳು ಕಣದಲ್ಲಿದ್ದಾಗ, ಅಂಥ ಕ್ಷೇತ್ರಗಳಲ್ಲಿ ಮುಸ್ಲಿಂ ಅಭ್ಯರ್ಥಿಗಳು ಆರಿಸಿ ಬರುವ ಸಾಧ್ಯತೆಯೂ ಹೆಚ್ಚು. ರಾಷ್ಟ್ರೀಯ ಮತ್ತು ಪ್ರಾದೇಶಿಕ ಪಕ್ಷಗಳ ಪೈಕಿ ಬಿಜೆಪಿಯೊಂದನ್ನು ಹೊರತುಪಡಿಸಿದರೆ, ಉಳಿದೆಲ್ಲ ಪಕ್ಷಗಳೂ ಮುಸ್ಲಿಮರಿಗೆ ಮಣೆ ಹಾಕುವುದನ್ನು ಎಲ್ಲ ಚುನಾವಣೆಗಳಲ್ಲೂ ಗಮನಿಸಬಹುದು. ಬಿಜೆಪಿಯ ಕೆಲವು ಅಭ್ಯರ್ಥಿಗಳು, 'ನಮಗೆ ನಿಮ್ಮ ಮತಗಳ ಅಗತ್ಯವಿಲ್ಲ, ನೀವು ನಮಗೆ ಮತ ಹಾಕಬೇಡಿ' ಎಂದು ಬಹಿರಂಗವಾಗಿ ಪ್ರಚಾರ ಮಾಡಿದ ನಿದರ್ಶನಗಳಿವೆ. ಈ ದೇಶದಲ್ಲಿ ಮುಸ್ಲಿಂ ಮತಗಳು ಗಣನೀಯವಾಗಿದ್ದರೂ, ಬಿಜೆಪಿ ಮಾತ್ರ ಶೇ. ಒಂದರಷ್ಟು ಮುಸ್ಲಿಮರಿಗೆ ಟಿಕೆಟ್ ನೀಡಿದೆ. ಹಾಗಂತ ಕಾಂಗ್ರೆಸ್‌ನಿಂದ ಲೋಕಸಭಾ ಸದಸ್ಯರಾದ ಮುಸ್ಲಿಮರು ಹೆಚ್ಚೇನಿಲ್ಲ. ಅದು ಕೇವಲ ಶೇ.7ರಷ್ಟು. ಲೋಕಸಭಾ ಸದಸ್ಯರಾದ ಮುಸ್ಲಿಮರು ಹೆಚ್ಚಾಗಿ ಸಿಗುವುದು ಲಾಲೂ ಪ್ರಸಾದ ಯಾದವ್ ಅವರ ರಾಷ್ಟ್ರೀಯ ಜನತಾದಳ ಪಕ್ಷದಿಂದ. ಆ ಪಕ್ಷದಿಂದ ಶೇ.17ರಷ್ಟು ಮುಸ್ಲಿಂ ಸದಸ್ಯರು ಲೋಕಸಭೆಯನ್ನು ಪ್ರವೇಶಿಸಿದ್ದಾರೆ. ಸಮಾಜವಾದಿ ಪಾರ್ಟಿಯಲ್ಲಿ ಶೇ.16ರಷ್ಟು ಮುಸ್ಲಿಂ ಲೋಕಸಭಾ ಸದಸ್ಯರಿದ್ದಾರೆ. ಇದಾದ ನಂತರದ ಸ್ಥಾನ ಮಮತಾ ಬ್ಯಾನರ್ಜಿಯವರ ತೃಣಮೂಲ ಕಾಂಗ್ರೆಸ್ (ಶೇ.15) ಪಕ್ಷಕ್ಕೆ ಸಲ್ಲುತ್ತದೆ. ಕಾಂಗ್ರೆಸ್ಸಿನಿಂದ ಸ್ಪರ್ಧಿಸಿದ ಪ್ರತಿ ಇಬ್ಬರು ಮುಸ್ಲಿಮರ ಪೈಕಿ ಒಬ್ಬ ಅಭ್ಯರ್ಥಿ ಗೆಲ್ಲುತ್ತಿರುವುದು ಗಮನಾರ್ಹ. ಪ್ರತಿಪಕ್ಷಗಳ ಪೈಕಿ ಮುಸ್ಲಿಮರಿಗೆ ವಿಶ್ವಾಸಾರ್ಹ ಪಕ್ಷ ಅಂದ್ರೆ ಕಾಂಗ್ರೆಸ್. ಎಲ್ಲ ಪಕ್ಷಗಳಿಗಿಂತ ಅವರು ಹೆಚ್ಚಾಗಿ ನಂಬುವುದು ಆ ಪಕ್ಷವನ್ನೇ. ಮುಸ್ಲಿಂ ಓಲೈಕೆಯಲ್ಲಿ ಕಮ್ಯುನಿಸ್ಟರು (ಸಿಪಿಎಂ) ಹಿಂದೆ ಬಿದ್ದಿಲ್ಲ. ಆ ಪಕ್ಷದ ಒಟ್ಟೂ ಲೋಕಸಭಾ ಸದಸ್ಯರುಗಳ ಪೈಕಿ ಶೇ.10ರಷ್ಟು ಮುಸ್ಲಿಮರು. ಆದರೆ ತೃಣಮೂಲ ಕಾಂಗ್ರೆಸ್ ಪ್ರಾಬಲ್ಯದಿಂದಾಗಿ ಪಶ್ಚಿಮ ಬಂಗಾಳದಲ್ಲಿ ಕಮ್ಯುನಿಸ್ಟರ ಪ್ರಾಬಲ್ಯ ಕುಂಠಿತಗೊಂಡಿದೆ.

ಹಲ್ಲಿಲ್ಲದ ಹಾವಿಗೆ ಬೇಕಿದೆ ಬಲ

ಅಶ್ವತ್ಥಕಟ್ಟೆ
ರಂಜಿತ್ ಎಚ್. ಅಶ್ವತ್ಥ
ranjith.hoskere@gmail.com

ವಿಶ್ವದಲ್ಲಿಯೇ ಅತಿದೊಡ್ಡ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹೊಂದಿರುವ ಭಾರತ ಮತ್ತೊಂದು ಚುನಾವಣೆಯ ಹೊಸ್ತಿಲಲ್ಲಿದೆ. ಬಿರು ಬೇಸಗೆಯ ನಡುವೆಯೂ ಭರ್ಜರಿ ಮತಬೇಟೆ ನಡೆಯುತ್ತಿದೆ. ದೇಶದ ಅಧಿಕಾರದ ಗದ್ದುಗೆ ಹಿಡಿಯಬೇಕೆಂದು ರಾಜಕೀಯ ಪಕ್ಷಗಳು ಮತ ಸೆಳೆಯುವ ಭರ್ಜರಿ ಪ್ರಚಾರವನ್ನು ದೇಶಾದ್ಯಂತ ನಡೆಸುತ್ತಿದ್ದರೆ, ಚುನಾವಣಾ ಆಯೋಗವು ರಾಜಕೀಯ ಪಕ್ಷಗಳ ರೀತಿಯಲ್ಲಿಯೇ 'ಮತಜಾಗೃತಿ'ಗೆ ಹತ್ತು ಹಲವು ಕ್ರಮಗಳನ್ನು ಕೈಗೊಂಡಿದೆ. ಕಡ್ಡಾಯ ಮತದಾನ ಎನ್ನುವ ಕಾನೂನು ಭಾರತದಲ್ಲಿ ಇಲ್ಲವಾದರೂ, ಗರಿಷ್ಠ ಮತದಾನವಾಗಬೇಕು ಎನ್ನುವುದು ಚುನಾವಣಾ ಆಯೋಗದ ಧ್ಯೇಯವಾಗಿದೆ.

ಪ್ರತಿಬಾರಿಯ ಚುನಾವಣೆಯಲ್ಲಿ ಶೇ.100ರಷ್ಟು ಮತದಾನವಾಗಬೇಕು ಎನ್ನುವ 'ಕನಸನ್ನು' ಚುನಾವಣಾ ಆಯೋಗ ಹೊಂದಿರುತ್ತದೆ. ಆದರೆ ನಗರ ಪ್ರದೇಶದಲ್ಲಿ ಈ ಪ್ರಮಾಣ ಶೇ.70 ದಾಟಿದರೆ, ಗ್ರಾಮೀಣ ಪ್ರದೇಶದಲ್ಲಿ ಅದು ಶೇ.80ಕ್ಕೆ ಬಂದು ನಿಂತರೆ ಆ ಚುನಾವಣೆ ಯಶಸ್ವಿ ಎನ್ನುವ ನಿಟ್ಟುಸಿರನ್ನು ಚುನಾವಣಾ ಆಯೋಗದ ಅಧಿಕಾರಿಗಳು ಬಿಡುತ್ತಾರೆ. ಮತದಾನದತ್ತ ನಿರಾಸಕ್ತಿ ವಹಿಸಲು ಒಬ್ಬೊಬ್ಬರು ಒಂದೊಂದು ಕಾರಣ ನೀಡಬಹುದು. ಆದರೆ ಬಹುಪಾಲು ಮಂದಿ, 'ಇರುವವರೆಲ್ಲ ಅನರ್ಹರಾಗಿರುವಾಗ ನಾವೇಕೆ ಮತ ಚಲಾಯಿಸಬೇಕು?', 'ಸ್ಪರ್ಧಿಸಿರುವ ಯಾವೊಬ್ಬ ಅಭ್ಯರ್ಥಿಯ ಬಗ್ಗೆಯೂ ನನಗೆ ಒಲವಿಲ್ಲ. ಹೀಗಿರುವಾಗ ನಾನೇಕೆ ಮತ ಹಾಕಬೇಕು?', 'ಅರ್ಹರಲ್ಲದ ಅಭ್ಯರ್ಥಿಗೆ ನನ್ನ ಮತವನ್ನು ಹಾಕುವ ಮೂಲಕ ಮನಸ್ಸಾಕ್ಷಿಗೆ ವಿರುದ್ಧವಾಗಿ ಏಕೆ ನಡೆದುಕೊಳ್ಳಬೇಕು?' ಎನ್ನುವ ಮನಸ್ಥಿತಿಯಿಂದ ಮತದಾನದಿಂದ ದೂರ ಉಳಿಯುತ್ತಾರೆ. ಈ ಕಾರಣಕ್ಕಾಗಿಯೇ 2009ರಲ್ಲಿ ಚುನಾವಣಾ ಆಯೋಗ 'ನೋಟಾ' (ಮೇಲಿನ ಯಾರೂ ಅಲ್ಲ) ಎಂಬ ಹೊಸ ಅವಕಾಶವನ್ನು ನೀಡಬೇಕು ಎಂದು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು. ಆರಂಭದಲ್ಲಿ ಇದಕ್ಕೆ ಸರಕಾರ ವಿರೋಧಿಸಿತ್ತು. ಆದರೆ ಸುಪ್ರೀಂ ಕೋರ್ಟ್ ಸೂಚನೆಯ ಮೇಲೆ 2013ರಿಂದ ದೇಶಾದ್ಯಂತ 'ನೋಟಾ' ಎನ್ನುವ ಅವಕಾಶವನ್ನು ಕಲ್ಪಿಸಿತ್ತು.

ಹಾಗೆ ನೋಡಿದರೆ, 2013ರ ಬಳಿಕವೇ ಮತವನ್ನು ತಿರಸ್ಕರಿಸುವ ವ್ಯವಸ್ಥೆ ಜಾರಿಗೆ ಬಂತು ಎಂದೇನಿಲ್ಲ. ಅದಕ್ಕೂ ಮೊದಲು ಯಾವುದೇ ವ್ಯಕ್ತಿಗೆ ಮತಗಟ್ಟೆ ಹೋಗಿ, ಅಲ್ಲಿ ತನ್ನ ಮತವನ್ನು ಯಾರಿಗೂ ಹಾಕುವುದಿಲ್ಲ ಎಂದು 'ಮತ ತಿರಸ್ಕರಿಸುವ' ಅವಕಾಶವಿತ್ತು. ಆದರೆ ಅದನ್ನು ಮಾಡಲು ಮತಗಟ್ಟೆ ಅಧಿಕಾರಿಯ ಬಳಿ ಪ್ರತ್ಯೇಕ ನಮೂನೆ ಪಡೆಯಬೇಕಿತ್ತು. ಈ ಬಗ್ಗೆ ಅನೇಕರಿಗೆ ಮಾಹಿತಿಯಿರಲಿಲ್ಲ. ಇದ್ದರೂ, ಈ ಎಲ್ಲ 'ರಗಳೆ' ಏಕೆಂದು ತೋಚಿದವರಿಗೆ ಮತವೊತ್ತಿ ಬರುತ್ತಿದ್ದರು. ಆದರೆ 2013ರಲ್ಲಿ ಸುಪ್ರೀಂ ಕೋರ್ಟ್ ಸೂಚನೆಯ ಬಳಿಕ ಬ್ಯಾಲೆಟ್‌ನಲ್ಲಿಯೇ 'ನೋಟಾ'ಕ್ಕೆ ಸ್ಥಾನವನ್ನು ನೀಡಲಾಗಿತ್ತು. ಆರಂಭದಲ್ಲಿ ದೇಶದ ಚುನಾವಣಾ ವ್ಯವಸ್ಥೆಯಲ್ಲಿ ನೋಟಾ ಬಹುದೊಡ್ಡ ಕ್ರಾಂತಿಯನ್ನೇ ಸೃಷ್ಟಿಸಲಿದೆ ಎನ್ನುವ ಭಾವನೆ ಅನೇಕರಲ್ಲಿತ್ತು. ಯಾರೂ ಅರ್ಹರಲ್ಲದಿದ್ದರೆ, ನೋಟಾವನ್ನೇ ಚಲಾಯಿಸಬಹುದು ಎನ್ನುವ ಲೆಕ್ಕಾಚಾರವೂ ಅನೇಕರಲ್ಲಿತ್ತು. ಆದರೆ ನೋಟಾ ಚಲಾವಣೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅದು 'ಹಲ್ಲಿಲ್ಲದ ಹಾವು' ಎನ್ನುವುದು ಸ್ಪಷ್ಟವಾಗುತ್ತದೆ.

ಮತದಾರನಿಗೆ ತನ್ನ ಕ್ಷೇತ್ರದ ಯಾವುದೇ ಅಭ್ಯರ್ಥಿಯ ಮೇಲೆ ನಂಬಿಕೆಯಿಲ್ಲದಿದ್ದರೆ, ತನ್ನನ್ನು ಪ್ರತಿನಿಧಿಸಲು ಆತ ಯೋಗ್ಯನಲ್ಲ ಎನಿಸಿದರೆ, ನೋಟಾ ಒತ್ತಿದರೆ ಆಯಿತು ಎನ್ನುವ ಮಾತುಗಳನ್ನು ಆಡುತ್ತಿದ್ದರು. ಈಗಲೂ ಅನೇಕರು ತಮ್ಮ ಕ್ಷೇತ್ರದ ಅಭ್ಯರ್ಥಿಗಳನ್ನು ನೋಡಿ ನೋಟಾ ಚಲಾಯಿಸುವುದೇ ಲೇಸು ಎನ್ನುವ ಮನಸ್ಥಿತಿಯಲ್ಲಿದ್ದಾರೆ. ಆದರೆ ಇಲ್ಲಿ ಗಮನಿಸಬೇಕಿರುವ ಪ್ರಮುಖ ಅಂಶವೆಂದರೆ, ನೋಟಾ ಚಲಾಯಿಸುವುದರಿಂದ ಆಗುವ ಬದಲಾವಣೆ ಏನು ಎನ್ನುವುದು. ಯಾವುದೇ ಕ್ಷೇತ್ರದಲ್ಲಿ ನೋಟಾ ಚಲಾಯಿಸಿದರೆ, ಅದು 'ರಿಜಿಸ್ಟರ್' ಆಗುತ್ತದೆ. ಅದನ್ನು ತಿರಸ್ಕೃತ ಮತವೆಂದೇ ಪರಿಗಣಿಸಲಾಗುತ್ತದೆ. ಆದರೆ ಅದು ಅಭ್ಯರ್ಥಿಗಳ ಅನರ್ಹತೆ ಅಥವಾ ಮರುಚುನಾವಣೆಗೆ ಸಹಕಾರಿಯಾಗುವುದಿಲ್ಲ. ಈ ಹಿಂದೆ ಚುನಾವಣಾ ಆಯೋಗದ ಆಯುಕ್ತರಾಗಿದ್ದ ಎಸ್.ವೈ. ಖುರೇಷಿ ಅವರೇ ಹೇಳುವಂತೆ, '100 ಮತದಾರರಲ್ಲಿ 99 ಮಂದಿ ನೋಟಾವನ್ನು ಚಲಾಯಿಸಿ, ಒಬ್ಬರೇ ಒಬ್ಬರು ಯಾವುದೋ ಒಬ್ಬ ಅಭ್ಯರ್ಥಿಗೆ ಮತ ನೀಡಿದರೆ ಆ ಅಭ್ಯರ್ಥಿಯೇ ವಿಜೇತನಾಗುತ್ತಾನೆ. ಯಾವುದೋ ಒಬ್ಬ ಅಭ್ಯರ್ಥಿಗೆ ಹಾಕಿರುವ ಮತವೊಂದೇ ಅರ್ಹವಾಗಿ, ಇನ್ನುಳಿದ 99 ಮತಗಳು ಅನರ್ಹವಾಗುತ್ತವೆ' ಎಂದಿದ್ದರು. ಅಂದರೆ ನೂರು ಜನರಲ್ಲಿ 99 ಮಂದಿಯ ತೀರ್ಮಾನಕ್ಕಿಂತ, ಒಬ್ಬ ವ್ಯಕ್ತಿ ಯಾರಿಗೆ ಮತ ಹಾಕುವನೋ ಆ ಅಭ್ಯರ್ಥಿಯನ್ನು ವಿಜೇತನೆಂದು ಘೋಷಿಸಲಾಗುತ್ತದೆ. ರಾಜಕೀಯ ವಿಶ್ಲೇಷಕರ ಪ್ರಕಾರ ನೋಟಾದ ಪ್ರಕ್ರಿಯೆಯಲ್ಲಿರುವ ಬಹುದೊಡ್ಡ 'ಲೂಪ್ ಹೋಲ್' ಇದೇ ಆಗಿದೆ. ಅಭ್ಯರ್ಥಿಯ ಬಗ್ಗೆ ಅಸಹನೆಯಿಂದ ಮತದಾರರು ಮೇಲಿನ ಯಾರೂ ಸರಿಯಿಲ್ಲ ಎನ್ನುವ ತೀರ್ಮಾನ ಕೊಟ್ಟರೂ ಅದು ಅರ್ಹವಾಗದ